ಶ್ರೀ ಜಿ. ಎಸ್. ಶಿವನಂಜಪ್ಪ.—ತುಮಕೂರು, ಹೆಬ್ಬೂರು, ಗುಬ್ಬಿ, ನಿಟ್ಟೂರು, ಕಿಬ್ಬನ ಹಳ್ಳಿಯಲ್ಲಿ ಹೇಮಾವತಿ ಯೋಜನೆಯ ಸಂಬಂಧದಲ್ಲಿ ಕಛೇರಿಗಳನ್ನು ಪ್ರಾರಂಭ ಮಾಡಿದರು ಇವು ಗಳನ್ನು ಪ್ರಾರಂಭ ಮಾಡಿ ಎರಡು ಎರಡೂವರೆ ವರ್ಷಗಳ ಮೇಲಾಯಿತು. ಈಗ ಚಾನಲ್ ಕೆಲಸ ಪ್ರಾರಂಭ ಮಾಡಲು ಹಣ ಇಲ್ಲವೆಂದು ಹೇಳುತ್ತಿದ್ದಾರೆ. ಹಾಗಿದ್ದರೆ ಈ ಕಚೇರಿಗಳನ್ನು ಪ್ರಾರಂಭ ಮಾಡಿದ್ದರ ಔಚಿತ್ಯವಾದರೂ ಏನು? ಈ ಕಛೇರಿಗಳನ್ನು ಪ್ರಾರಂಭ ಮಾಡಿದ ಮೇಲೆ ಕೆಲಸದಲ್ಲಿ ಏನಾದರು ಪ್ರಗತಿ ಆಗಿದೆಯೇ ಹೇಗೆ ?

ಶ್ರೀ ಎಚ್. ಡಿ. ದೇವೇಗೌಡ.—ಕೆಲಸ ಮಾಡಬೇಕೆಂದೇ ಈ ಕಛೇರಿಗಳನ್ನು ಪ್ರಾರಂಭ ಮಾಡಿದ್ದು. ಇಲ್ಲದಿದ್ದರೆ ಈ ಕಛೇರಿಗಳನ್ನು ಪ್ರಾರಂಭ ಮಾಡುತ್ತಲೇ ಇರಲಿಲ್ಲ. ಕೆನಾಲ್ ಅಲೈನ್ ಮೆಂಟ್ ಸರ್ವೆ ಮಾಡಿ ಫೀಲ್ಡ್ ಡಾಟಾ ಕಲೆಕ್ಟ್ ಮಾಡುವ ಸಲುವಾಗಿ ಈ ಕಛೇರಿಗಳನ್ನು ಪ್ರಾರಂಭ ಮಾಡಿದ್ದು. ಬಾಗೂರು ಟನಲ್ ಕೆಲಸ ಮುಗಿದನಂತರ ನೀರನ್ನು ಯಾವ ರೀತಿ ತೆಗೆದುಕೊಂಡು ಹೋಗಬೇಕು ಎಂಬುದನ್ನು ತಿಳಿದುಕೊಳ್ಳುವ ಸಲುವಾಗಿ ಈ ಕಛೇರಿಗಳನ್ನು ಪ್ರಾರಂಭ ಮಾಡಿದ್ದು ಅದರ ಪ್ರಕಾರ ಅವರು ಕೆಲಸ ಮಾಡುತ್ತಿದ್ದಾರೆ.

ಬೆಣ್ಣೆ ತೊರೆ ಯೋಜನೆಯಿಂದ ಗುಲ್ಬರ್ಗಾ ನಗರಕ್ಕೆ ಕುಡಿಯುವ ನೀರನ್ನೊಗಿಸುವ ಬಗ್ಗೆ

೨೨೦(ಸಹಿ) ಶ್ರೀ ಎಸ್. ಕೆ. ಕಾಂತ (ಗುಲ್ಬರ್ಗ).— ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;—

ಅ) ಬೆಣ್ಣೆತೊರೆ ನೀರಾವರಿ ಯೋಜನೆ ಮೂಲಕ ಗುಲ್ಬರ್ಗಾ ನಗರಕ್ಕೆ ನೀರು ಸರಬರಾಜು ಮಾಡುವ ಯೋಜನೆ ಎಷ್ಟು ವರ್ಷಗಳಲ್ಲಿ ಪೂರ್ಣಗೊಳ್ಳುವುದು ಮತ್ತು ಈ ಯೋಜನೆಗೆ ಕಳೆದ ಎರಡು ವರ್ಷಗಳಲ್ಲಿ ಅಂದರೆ ೧೯೮೩-೮೪ ಮತ್ತು ೧೯೮೪-೮೫ನೇ ಸಾಲುಗಳಿಗಾಗಿ ಎಷ್ಟು ಹಣ ಖರ್ಚು ಮಾಡಲು ನಿಗದಿ ಮಾಡಲಾಗಿತ್ತು ಮತ್ತು ಎಷ್ಟು ಹಣ ವೆಚ್ಚವಾಯಿತು ?

ಆ) ಸದರಿ ಎರಡು ಸಾಲುಗಳಲ್ಲಿ ನಿಗದಿ ಹಣವನ್ನು ವ್ಯಯ ಮಾಡದಿದ್ದಲ್ಲಿ ಅದಕ್ಕೆ ಕಾರಣ ವೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಮಂತ್ರಿಗಳು).—

ಅ) ಗುಲ್ಬರ್ಗಾ ನಗರಕ್ಕೆ ಕುಡಿಯುವ ನೀರಿನ ಸರಬರಾಜು ಮಾಡುವುದು ಬೆಣ್ಣೆ ತೊರೆ ಯೋಜನೆಯ ಜಲಾಶಯದ ನಿರ್ಮಾಣವನ್ನು ಅವಲಂಭಿಸಿರುತ್ತದೆ. ಗುತ್ತಿಗೆ ಕರಾರಿನ ಪ್ರಕಾರ ೧೯೮೫ನೇ ಇಸವಿ ಅಂತ್ಯದ ವೇಳೆಗೆ ಕೊಡಿ ನೆತ್ತಿ ಮಟ್ಟದ ಕೆಲಸ ಪೂರ್ಣ ಗೊಳಿಸಬೇಕಾಗುವುದು. ೧೯೮೬ನೇ ಇಸವಿ ವೇಳೆಗೆ ಬೆಣ್ಣೆ ತೊರೆ ಜಲಾಶಯದಿಂದ ಕುಡಿಯುವ ನೀರನ್ನು ಸರಬರಾಜು ಮಾಡುವ ಉದ್ದೇಶವಿದೆ. ಬೆಣ್ಣೆ ತೊರೆ ನೀರಾವರಿ ಯೋಜನೆಗೆ ೧೯೮೩-೮೪ರಲ್ಲಿ ೨೫ ಲಕ್ಷ ಅನುದಾನವಿದ್ದು ೨೬.೮೯ ಲಕ್ಷ ರೂಪಾಯಿಗಳು ಹಾಗೂ ೧೯೮೪-೮೫ರಲ್ಲಿ ೨೦೦ ಲಕ್ಷ ರೂಪಾಯಿಗಳು ಅನುದಾನವಿದ್ದು ೭೨.೨೬ ಲಕ್ಷ ರೂಪಾಯಿಗಳು ವೆಚ್ಚವಾಗಿರುತ್ತದೆ.

ಆ) ೧೯೮೪-೮೫ನೇ ಸಾಲಿನಲ್ಲಿ ಗುತ್ತಿಗೆಯನ್ನು ನೇಮಕ ಮಾಡುವುದರಲ್ಲಿ ಕಾಲಾವಕಾಶ ಬೇಕಾಯಿತು. ೧೯೮೫ನೇ ಜನವರಿ ಮಾಹೆಯಲ್ಲಿ ಗುತ್ತಿಗೆಯನ್ನು ನಿರ್ಧರಿಸಲಾಯಿತು.

ಶ್ರೀ ಎಸ್. ಕೆ. ಕಾಂತ.—೧೯೮೫ನೇ ಜನವರಿ ಮಾಹೆಯಲ್ಲಿ ಗುತ್ತಿಗೆಯನ್ನು ನಿರ್ಧರಿಸ ಲಾಯಿತು. ಆದರೆ ಅಲ್ಲಿ ಇನ್ನೂ ಕೆಲಸ ಪ್ರಾರಂಭವಾಗಿಲ್ಲ. ೧೯೮೪-೮೫ರಲ್ಲಿ ಈ ಕೆಲಸಕ್ಕೆ ೨೦೦ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದರೂ ಸಹ ಕೇವಲ ೭೨ ಲಕ್ಷ ರೂಪಾಯಿಗಳ ಕೆಲಸ ಆಗಿದೆ. ಇದೇ ರೀತಿ ಕೆಲಸ ನಡೆದರೆ ಜನರಿಗೆ ಕುಡಿಯುವ ನೀರನ್ನು ಒದಗಿಸುವ ಕೆಲಸ ಬಹಳ ನಿಧಾನ ವಾಗುತ್ತದೆ. ಆದ್ದರಿಂದ ಈ ಕೆಲಸವನ್ನು ಜಾಗ್ರತೆ ಮುಗಿಸಲು ಕ್ರಮ ಕೈಕೊಳ್ಳುತ್ತೀರಾ?

ಶ್ರೀ ಎಚ್. ಡಿ. ದೇವೇಗೌಡ.—ಇದನ್ನು ತ್ವರಿತವಾಗಿ ಮಾಡಬೇಕೆಂಬ ದೃಷ್ಟಿಯಿಂದಲೇ ಕಳೆದ ಸಲ ೭೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈ ಕೆಲಸ ಬಹಳ ಕಾಲದಿಂದ ನೆನೆಗುದಿಗೆ ಬಿದ್ದಿತ್ತು. ಇದು ಮಾನ್ಯ ಧರ್ಮಸಿಂಗ್ ಅವರಿಗೂ ಸಹ ಗೊತ್ತಿದೆ. ಈ ಹಿಂದೆ ಈ ಯೋಜನೆಯ ಬಗ್ಗೆ ಒಂದು ಅಂತಿಮ ನಿರ್ಣಯ ಮಾಡುವುದಕ್ಕೆ ಆಗಿರಲಿಲ್ಲಾ. ಆದರೆ ನಾವು ಈ ಯೋಜನೆಗೆ ಎರಡು ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ನಿರ್ಧಾರ ಮಾಡಿ ಹೋದ ಸಲ ಇದನ್ನು ಬಜೆಟ್‌ನಲ್ಲಿ ಸೇರಿಸಲಾಯಿತು. ಈ ಕೆಲಸದ ಬಗ್ಗೆ ೬ ಕೋಟಿ ರೂಪಾಯಿಗಳ ಟೆಂಡರ್ ಕರೆಯಲಾಯಿತು. ಆದರೆ ಈ ನಿಯಮಾವಳಿಗಳ ಪ್ರಕಾರ ಟೆಂಡರ್‌ನ್ನು ಒಪ್ಪಿಕೊಳ್ಳಲು ಆಗಲಿಲ್ಲ. ಆದ್ದರಿಂದ ಕೆಲಸ ನಿಧಾನವಾಯಿತು. ಆದರೂ ೭೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈಗ ಟೆಂಡರ್ ಒಪ್ಪಿಗೆಯಾಗಿದೆ. ಇನ್ನು ವಿಳಂಬ ಮಾಡದಂತೆ ಕೆಲಸ ಮಾಡುತ್ತೇವೆ.

ಶ್ರೀ ಎಸ್. ಕೆ. ಕಾಂತ.—೧೯೮೫ನೇ ಜನವರಿ ಪೂಹೆಯಲ್ಲಿ ಗುತ್ತಿಗೆಯನ್ನು ನಿರ್ಧಾರ ಮಾಡಿದ ಮೇಲೂ ಸಹ ಕೆಲಸ ಪ್ರಾರಂಭವಾಗಿಲ್ಲ. ಇದರಿಂದ ಒಂದು ವರ್ಷ ಕಳೆದು ಹೋಗುವ ಪರಿಸ್ಥಿತಿ ಬಂದಿದೆ. ಇದರಿಂದ ಗುಲ್ಬರ್ಗಾ ನಗರಕ್ಕೆ ನೀರು ಒದಗಿಸುವ ಕೆಲಸ ಪುತ್ತೆ ಮುಂದಕ್ಕೆ ಹೋಗ ಬಹುದು. ಆದ್ದರಿಂದ ಈ ಕೆಲಸವನ್ನು ಯಾವಾಗ ಮುಗಿಸುತ್ತೀರಾ ಎಂದು ನಾನು ಕೇಳುತ್ತಿದ್ದೇನೆ ?

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಜಾಗ್ರತೆ ಈ ಕೆಲಸ ಮುಗಿಸಲು ಸರ್ಕಾರ ಆಶಕ್ತಿ ಹೊಂದಿದೆ. ಪಿಲ್-ವೇ ವರ್ಕ್ ನಡೆಯುತ್ತಿತ್ತು ಆದರೆ ಪ್ಲಾಸ್ಟಿಂಗ್ ಕೆಲಸ ನಡೆದಾಗ ಪಕ್ಕದ ಹಳ್ಳಿಯ ಜನ ತಮ್ಮ ಹಳ್ಳಿಯನ್ನು ಬೇರೆ ಕಡೆಗೆ ಸ್ಥಳಾಂತರ ಮಾಡುವವರೆಗೂ ಈ ಕೆಲಸವನ್ನು ನಿಲ್ಲಿಸಬೇಕೆಂದು ಗಲಾಟೆ ಮಾಡಿದರು. ಸತ್ಯಾಗ್ರಹ ಸಹ ಮಾಡಿದರು. ಇದರಿಂದ ಕೆಲಸವನ್ನು ನಿಧಾನವಾಯಿತು. ಈಗ ಈ ಊರನ್ನು ಬೇರೆ ಕಡೆಗೆ ಸ್ಥಳಾಂತರ ಮಾಡುವುದಕ್ಕೋಸ್ಕರ ೩೬ ಲಕ್ಷ ರೂಪಾಯಿಗಳ ಒಂದು ವರದಿ ಬಂದಿದೆ. ಇದರ ಬಗ್ಗೆ ಸರ್ಕಾರ ನಿರ್ಣಯ ಮಾಡಬೇಕು. ಮತ್ತೊಂದು ವಿಚಾರವೆಂದರೆ, ಈ ಯೋಜನೆಗೆ ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡಿನವರು ಮೂರು ಕೋಟಿ ರೂಪಯಿಗಳನ್ನು ಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಅದರ ಪ್ರಕಾರ ಅವರು ಜಾಗ್ರತೆ ೩ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದರೆ ನಾವು ಇನ್ನೂ ವೇಗದಿಂದ ಕೆಲಸ ಮಾಡುತ್ತೇವೆ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಗುಲ್ಬರ್ಗ ನಗರಕ್ಕೆ ಕುಡಿಯುವ ನೀರನ್ನು ಒದಗಿಸಲು ೧೯೮೧ರಲ್ಲಿ ೪.೬ ಕೋಟಿ ರೂಪಾಯಿಗಳ ಒಂದು ಯೋಜನೆ ಮಂಜೂರಾಗಿತ್ತು. ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡಿನವರು ಇದಕ್ಕೆ ೩ ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆದರೆ ಈ ಬೆಣ್ಣೆತೊರೆ ನೀರಾವರಿ ಯೋಜನೆಗೆ ಸರ್ಕಾರದವರು ಸಾಕಷ್ಟು ಹಣ ಒದಗಿಸುವುದರ ಮೂಲಕ ಜಾಗ್ರತೆ ಕೆಲಸ ಮುಗಿಸದಿದ್ದರೆ ಗುಲ್ಬರ್ಗ ನಗರಕ್ಕೆ ಕುಡಿಯುವ ನೀರನ್ನು ಒದಗಿಸುವುದಕ್ಕಾಗುವುದಿಲ್ಲ. ಈ ಯೋಜನೆಯ ಒಟ್ಟು ನೀರಿನ ಪ್ರಮಾಣದಲ್ಲಿ ಒಂದು ಭಾಗವನ್ನು ಕುಡಿಯುವ ನೀರನ್ನು ಒದಗಿಸಲು ಉಪಯೋಗ ಮಾಡಬಹುದಾಗಿದೆ. ಆದ್ದರಿಂದ.....

ಅಧ್ಯಕ್ಷರು.—ತಾವು ನೇರವಾಗಿ ಪ್ರಶ್ನೆ ಕೇಳಿ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಈಗಾಗಲೇ ಗುಲ್ಬರ್ಗ ನಗರಕ್ಕೆ ಕುಡಿಯುವ ನೀರನ್ನು ಒದಗಿಸಲು ೪.೬ ಕೋಟಿ ರೂಪಾಯಿಗಳ ಯೋಜನೆ ಮಂಜೂರಾಗಿದೆ. ಅರ್ಬನ್ ವಾಟರ್ ಸಪ್ಲೈ ಬೋರ್ಡಿನವರು ೩ ಕೋಟಿ ರೂ. ಅನ್ನು ಒದಗಿಸುತ್ತೇವೆಂದು ಹೇಳಿದ್ದಾರೆ. ಅದಕ್ಕೂ ಇದಕ್ಕೂ ಸಂಬಂಧವಿದೆ. ಈ ಕೆಲಸವನ್ನು ತೀವ್ರಗತಿಯಿಂದ ಮಾಡಬೇಕೆಂದು ಹೇಳುತ್ತೇನೆ ಆದುದರಿಂದ ಇದರ ಬಗ್ಗೆ ಡೀಟೈಲ್ ಡಿಸ್‌ಕಷನ್ ಆಗಬೇಕಾಗಿದೆ. ಹಾಪ್ ಅನ್ ಅವರ್ ಡಿಸ್‌ಕಷನ್‌ಗೆ ತಾವು ಅವಕಾಶವನ್ನು ಒದಗಿಸಿಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು.—ಹಾಪ್ ಅನ್ ಅವರ್ ಡಿಸ್‌ಕಷನ್‌ಗೆ ಬರೆದು ಕಳಿಸಿಕೊಡಿ. ಈಗ ನೇರವಾಗಿ ಪ್ರಶ್ನೆ ಹಾಕಿ.

ಶ್ರೀ ಧರ್ಮಸಿಂಗ್ ನಾರಾಯಣ್‌ಸಿಂಗ್.—೧೯೮೯ಕ್ಕೆ ಬೆಣ್ಣೆತೊರೆ ನೀರಾವರಿ ಯೋಜನೆಯನ್ನು ಮುಗಿಸುವುದಾದರೆ ಒಟ್ಟು ಎಷ್ಟು ಹಣ ಬೇಕಾಗುತ್ತದೆ ? ಇದನ್ನು ಯಾವಾಗ ಮುಗಿಸುತ್ತೀರಿ ?

ಶ್ರೀ ಹೆಚ್.ಡಿ. ದೇವೇಗೌಡ.—ನಾವು ಈಗಾಗಲೇ ೬ ಕೋಟಿ ರೂ. ಅನ್ನು ಸ್ಪಿಲ್‌ವೇ ಕೆಲಸ ಕ್ಕೆಂದು ಇಟ್ಟಿದ್ದೇವೆ ಈ ಕೆಲಸಕ್ಕೆ ಟೆಂಡರ್ ಕರೆಯಬೇಕೆಂದು ನಿರ್ಣಯ ಈಗ ಆಗಿದೆ. ಮಾನ್ಯ ಮಾಜಿ ಮಂತ್ರಿಗಳಾದ ಶ್ರೀ ಧರ್ಮಸಿಂಗ್ ರವರು ಅವರ ಕಾಲದಲ್ಲಿ ನಾಲ್ಕೂವರೆ ಕೋಟಿ ರೂಪಾಯಿ ಮಂಜೂರು ಮಾಡಿದ್ದಾರೆಂದು ಹೇಳಿದರು ಅದಕ್ಕೆ ಸರ್ಕಾರೀ ಆಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಕೊಡುವು ದಕ್ಕೆ ಮತ್ತು ವೇರಿಯಸ್ ಫೈನಾನ್ಸ್ ಇನ್‌ಸ್ಟಿಟ್ಯೂಷನ್‌ನಿಂದ ಹಣವನ್ನು ಪಡೆದುಕೊಳ್ಳುವುದಕ್ಕೆ ಸ್ವಲ್ಪ ವಿಳಂಬವಾಗುತ್ತಿದೆಯೆಂದು ಅವರಿಗೆ ಗೊತ್ತಾಗಿದೆ. ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡಿ ನವರು ೩ ಕೋಟಿ ರೂಪಾಯಿಗಳ ಹಣವನ್ನು ಕೊಡುವುದಕ್ಕೆ ಅವರಿಗೆ ಸಧ್ಯಕ್ಕೆ ಸಾಧ್ಯವಿಲ್ಲವೆಂದು ಕಾಣುತ್ತದೆ. ಅವರು ಆ ಹಣವನ್ನು ಡಿಪಾಜಿಟ್ ಮಾಡಿದ ತಕ್ಷಣ, ಈ ೬ ಕೋಟಿ ರೂಪಾಯಿ ಸ್ಕೀಮಿನ ಸ್ಪಿಲ್‌ವೇ ಯೋಜನೆ ಏನಿದೆ, ಅದನ್ನು ಆದಷ್ಟು ಬೇಗ ಮುಗಿಸಬಹುದು. ಇದರಿಂದ ನೀರನ್ನು ಸ್ಟೋರ್ ಮಾಡುತ್ತೇವೆ. ಫಸ್ಟ್ ಪ್ರಿಫರೆನ್ಸ್ ಗುಲ್ಬರ್ಗ ಸಿಟಿಗೆ ಕೊಡುತ್ತೇವೆ. ಆಮೇಲೆ ನೀರಾವರಿ ಯೋಜನೆಗಳನ್ನು ಮಾಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಧರ್ಮಸಿಂಗ್ ನಾರಾಯಣ್‌ಸಿಂಗ್.—ಈ ಪ್ರಶ್ನೆ ಬಹಳ ಪ್ರಾಮುಖ್ಯವಾದುದಾಗಿದೆ.

ಅಧ್ಯಕ್ಷರು.—ಎಲ್ಲಾ ಪ್ರಶ್ನೆಗಳು ಬಹಳ ಪ್ರಾಮುಖ್ಯವಾದುದು. ಎಲ್ಲರಿಗೂ ಅವಕಾಶವನ್ನು ಮಾಡಿಕೊಡುವುದು ನನ್ನ ಕರ್ತವ್ಯ. ತಾವು ಹಾಫ್ ಅನ್ ಅವರ್ ಡಿಸ್‌ಕಷನ್‌ಗೆ ಕಳಿಸಿಕೊಡಿ. ಆವ ಕಾಶವನ್ನು ಮಾಡಿಕೊಡುತ್ತೇನೆ.

ಹುಬ್ಬಳ್ಳಿ ಶೋಲಾಪುರ ರಾಷ್ಟ್ರೀಯ ಹೆದ್ದಾರಿ ಮೇಲೆ ಅನಗವಾಡಿ ಹತ್ತಿರ ಘಟಪ್ರಭಾ ನದಿಗೆ ಅಡ್ಡಲಾಗಿ ಸೇತುವೆ ಕಟ್ಟುವ ಬಗ್ಗೆ

೨೨೧ (೭೩೨) ಶ್ರೀ ಬಾಬುರೆಡ್ಡಿ ಎಂ. ತುಂಗಲ್ (ಬಿಳಗಿ).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳ ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಹುಬ್ಬಳ್ಳಿ–ಶೋಲಾಪುರ ರಾಷ್ಟ್ರೀಯ ಹೆದ್ದಾರಿ ಮೇಲೆ ಅನಗವಾಡಿ ಹತ್ತಿರ ಘಟಪ್ರಭಾ ನದಿಗೆ ಅಡ್ಡಲಾಗಿ ಸೇತುವೆ ಕಟ್ಟುವ ಸಲಹೆ ತಯಾರಾಗಿ ಸರ್ಕಾರದ ಮುಂದೆ ಇದೆಯೇ ?

ಆ) ಹಾಗಿದ್ದಲ್ಲಿ ಈ ಸೇತುವೆಯ ನಿರ್ಮಾಣದ ಬಗ್ಗೆ ಈವರೆಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಇ) ಸದರಿ ಸೇತುವೆಯ ನಿರ್ಮಾಣ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗು ವುದು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹುಬ್ಬಳ್ಳಿ–ಶೋಲಾಪುರ ರಾಜ್ಯ ಹೆದ್ದಾರಿಯ ಮೇಲೆ ಅನಗವಾಡಿ ಹತ್ತಿರ ಘಟಪ್ರಭಾ ನದಿಗೆ ಸೇತುವೆ ಕಟ್ಟುವ ಪ್ರಸ್ತಾಪನೆ ಇದೆ.

ಆ) ೨೪೦.೦೦ ಲಕ್ಷ ರೂ.ಗಳಅಂದಾಜುಪಟ್ಟಿಗೆ ಆಡಳಿತ ಮಂಜೂರಾತಿಯನ್ನು ನೀಡಲಾಗಿದೆ.

ಇ) ಈ ಕೆಲಸವು ೧೯೯೦ರ ವೇಳೆಗೆ ಮುಗಿಯಬಹುದು.

ಶ್ರೀ ಬಾಬುರೆಡ್ಡಿ ಎಂ. ತುಂಗಲ್.—ಬೀಳಗಿ ತಾಲ್ಲೂಕಿನ ಅನೇಕ ಭಾಗಗಳಲ್ಲಿ ಮುಳುಗಡೆ ನೆವದಿಂದ ಅನೇಕ ಕಾರ್ಯಗಳು ಸ್ಥಗಿತವಾಗಿವೆ. ಈ ಯೋಜನೆಯನ್ನು ಕೈ ಬಿಡುವ ಯೋಚನೆ ಇದೆಯೇ ? ೨೪೦.೦೦ ಲಕ್ಷ ರೂ.ಗಳ ಅಂದಾಜಿಗೆ ಮಂಜೂರಾತಿಯನ್ನು ನೀಡಲಾಗಿದೆಯೆಂದು ಹೇಳಿದ್ದೀರಿ ಮತ್ತು ಈ ಕೆಲಸವು ೧೯೯೦ರ ಹೊತ್ತಿಗೆ ಮುಗಿಯಬಹುದೆಂದು ಹೇಳಿದ್ದೀರಿ. ಈ ಕೆಲಸವನ್ನು ಆದಷ್ಟು ಬೇಗ ಮುಗಿಸಲು, ಈಗಾಗಲೇ ಇದಕ್ಕೆ ಅಡಿಗಲ್ಲನ್ನು ಹಾಕಿ, ಇದನ್ನು ಏತಕ್ಕೆ ಕಾರ್ಯಾರಂಭ ಮಾಡಬಾರದು ?

ಶ್ರೀ ಹೆಚ್.ಡಿ. ದೇವೇಗೌಡ.—ಈ ಕೆಲಸವನ್ನು ಕೈ ಬಿಡುವ ಪ್ರಶ್ನೆಯೇ ಇಲ್ಲ. ಸೆಂಟ್ರಲ್ ಸಿ.ಆರ್.ಎಸ್.ಫಂಡ್‌ನಿಂದ ೧೨೫ ಲಕ್ಷ ರೂಪಾಯಿಗೆ ಮಂಜೂರಾತಿ ಸಿಗಬೇಕು. ಆದುದರಿಂದ ಈ